೧೯) ಗ್ರಾಮಗಳಲ್ಲಿ ನಿವೇಶನಗಳನ್ನು ಹಂಚುವ ವ್ಯವಸ್ಥೆಗೆ ಇಡೀ ಗ್ರಾಮವನ್ನು ಒಂದು ಘಟಕವನ್ನಾಗಿ ಪರಿಗಣಿಸುವುದು.

ಶ್ರೀ ಆರ್. ರಾಮಯ್ಯ.—ಮುಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಮೇಲೆ ನಿವೇಶನಗಳನ್ನು ಹಂಚುವ ಮತ್ತು ಮನೆಗಳನ್ನು ಹಂಚುವ ವ್ಯವಸ್ಥೆ ಅವರಿಗೆ ಹಸ್ತಾಂತರವಾಗಿದೆ. ಆದರೆ ನಿವೇಶನಗಳು ಇದ್ದು ಸಹ ಕೆಲವೊಮ್ಮೆ ಬಿತ್ತುವಾರಿಯಾಗಿರುವುದು ಉಂಟು. ಇಂಥ ಸಂದರ್ಭಗಳಲ್ಲಿ ಗ್ರಾಮ ಠಾಣವನ್ನು ಅಳತೆ ಮಾಡಿಸಬೇಕಾಗಿ ಬರುವುದು. ಗ್ರಾಮ ಠಾಣಕ್ಕೆ ಅನೇಕ ಆರ್.ಸ.ನಂ. ಗಳು ಭೂಸ್ವಾಧೀನವಾಗಿರುತ್ತವೆ. ಇವುಗಳಿಲ್ಲವನ್ನು ಪ್ರತ್ಯೇಕವಾಗಿ ಅಳತೆ ಮಾಡಿಸಲು ಪ್ರತ್ಯೇಕವಾಗಿ ಪ್ರತಿ ಸ.ನಂ.ಗಳಿಗೆ ಅಳತೆ ಶುಲ್ಕವನ್ನು ಕಟ್ಟಬೇಕಾಗಿರುವುದರಿಂದ ಸ್ಥಳೀಯ ಸಂಸ್ಥೆಗಳಿಗೆ ಬಹಳ ಹಣ ಖರ್ಚು ಬರುತ್ತದೆ. ಆದುದರಿಂದ ಇಡೀ ಗ್ರಾಮ ಠಾಣವನ್ನು ಒಂದು ಘಟಕವನ್ನಾಗಿ ಮಾಡಿ ಒಂದೇ ಅಂಕಿತ ಶುಲ್ಕವನ್ನು ಕಟ್ಟಿಸಿಕೊಂಡು ಅಳತೆ ಮಾಡಿಸುವ ಏರ್ಪಾಟನ್ನು ಸರ್ಕಾರ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿರುವುದೇ ಬೇರೆ, ಅವರು ಓದಿರುವುದೇ ಬೇರೆ ಆದರೂ ಅವರ ಪ್ರಶ್ನೆಗೆ ಉತ್ತರ ತರಿಸಿಕೊಡುತ್ತೇನೆ,

೩೦) ಚಿಕ್ಕನಾಯಕನಹಳ್ಳಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ವರ್ಗಾವಣೆಗೆ ಒತ್ತಾಯ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಸರ್ಕಾರದ ಯಾವುದೇ ಕಾರ್ಯಕ್ರಮ ಸಮರ್ಪಕವಾಗಿ ಕಾರ್ಯಗತ ಆಗಬೇಕಾದರೆ ಅಧಿಕಾರಿಗಳು ದಕ್ಷರೂ ಪ್ರಾಮಾಣಿಕರೂ, ಕರ್ತವ್ಯ ನಿಷ್ಠರೂ ಆಗಿರಬೇಕು. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾಗಿ ಈಗ್ಗೆ ಎರಡು ವರ್ಷಗಳ ಹಿಂದೆ ಬಂದಿರುವವರು ಅವರು ಬಂದಾಗಿನಿಂದ ತಾಲ್ಲೂಕಿನ ಯಾವುದೇ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಕಾರ್ಯಗತ ಮಾಡದೇ ಅವರ ಕಛೇರಿಯು ಕೂಡ ಅವರ ಹಿಡಿತದಲ್ಲಿಲ್ಲದೆ ಅಧ್ಯಕ್ಷತೆಯಿಂದ ಕೂಡಿದೆ. ತಾಲ್ಲೂಕಿನಾದ್ಯಂತ ಕುಡಿಯುವ ನೀರಿನ ಬಾವಿಗಳ ಹ್ಯಾಂಡ್ ಪಂಪ್ ಕೆಟ್ಟುಹೋಗಿದೆ. ಮೋಟಾರ್ ವಗೈರೆಗಳು ಕಟ್ಟುಹೋಗಿ ತಿಂಗಳು ಗಟ್ಟಲೆಯಾದರೂ ಹಾಗೂ ಇದನ್ನು ಇವರ ಗಮನಕ್ಕೆ ಅನೇಕ ಸಾರಿ ಹೇಳಿದಾಗ್ಯೂ ಕ್ರಮ ತೆಗೆದುಕೊಳ್ಳದೆ ಜನ ತಿಂಗಳುಗಟ್ಟಲೆ ನೀರಿಲ್ಲದೆ ಕಂಗೆಟ್ಟಿದ್ದಾರೆ. ಅಲ್ಲದೆ ಈ ತಾಲ್ಲೂಕಿಗೆ ಬಂದ ಹಣ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸದೆ ಲ್ಯಾಪ್ಸ್ ಆದ ಸಂದರ್ಭಗಳೂ ಇವೆ. ೧೯೮೫-೮೬ ರಿಂದಲೂ ಕೆರೆಗಳ ನಿರ್ಮಾಣದ ಬಗ್ಗೆ ಸರ್ಕಾರ ಕೇಳಿದ್ದರೂ ಈವರೆಗೂ ಪ್ಲಾನ್ ಹಾಗೂ ಎಸ್ಟಿಮೇಟ್ ಗಳನ್ನು ಮಾಡಿ ಕಳುಹಿಸಿರುವುದಿಲ್ಲ. ನಿರ್ಮಾಣದ ಹಂತದಲ್ಲೇ ಇರುವ ಮೂರು ಸೇತುವೆಗಳು ಮೂರು ವರ್ಷದಿಂದಲೂ ಮುಕ್ತಾಯ ಆಗದೆ ಹಾಗೇ ಇವೆ. ತಾಲ್ಲೂಕಿನ ಕೆ.ಡಿ.ಪಿ. ವಿಾಟಿಂಗಿನಲ್ಲಿ ಇಲಾಖೆಯ ಬಗ್ಗೆ ಯಾವುದೇ ಪ್ರಶ್ನೆ ಕೇಳಿದರೂ ಉತ್ತರಿಸುವುದಿಲ್ಲ. ಅಲ್ಲದೆ ಸಂಬಂಧಪಟ್ಟ ಮಾಹಿತಿಗಳನ್ನೂ ಒದಗಿಸುವುದಿಲ್ಲ ಜಿಲ್ಲಾ ಪರಿಷತ್ ಅಧ್ಯಕ್ಷರಿಂದ ಹಿಡಿದು ಈ ಇಲಾಖೆಯ ಎಲ್ಲಾ ಅಧಿಕಾರಿಗಳೂ ಇವರ ಕಾರ್ಯವೈಖರಿಯ ಬಗ್ಗೆ ಬೇಸತ್ತಿರುತ್ತಾರೆ. ಇವರನ್ನು ವರ್ಗ ಮಾಡಿ ಬೇರೆ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯೊಬ್ಬರನ್ನು ಹಾಕಬೇಕೆಂದು ಜಿಲ್ಲಾ ಪರಿಷತ್ ಅಧ್ಯಕ್ಷರು ಹಾಗೂ ಕ್ಷೇತ್ರದ ಶಾಸಕನಾದ ನಾನು ಸಂಪಾರು ಮೂರು ತಿಂಗಳಿಂದಲೂ ಸಂಬಂಧಪಟ್ಟ ಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರನ್ನು ಅನೇಕ ಬಾರಿ ವಿನಂತಿಸಿಕೊಂಡರೂ ಪ್ರಯೋಜನವಾಗದಿರುವುದರಿಂದ ಈ ಕ್ಷೇತ್ರದ ಶಾಸಕನಾಗಿ ಈ ಕಛೇರಿಯ ಅಸಮರ್ಪಕ ಆಡಳಿತವನ್ನು ನೋಡಿಯೂ ಮೌನಿಯಾಗಿರಬೇಕಾಗಿದೆ. ಆದ್ದರಿಂದ ಈ ಕೂಡಲೇ ಸದರಿ ಅಧಿಕಾರಿಯನ್ನು ವರ್ಗ ಮಾಡಿ ಸದರಿ ಕಛೇರಿಯಲ್ಲಿನ ಇತರೆ ನೌಕರರನ್ನೂ ಸಹ ಬದಲಾಯಿಸಿ ಈ ಕಛೇರಿಯನ್ನು ಶುದ್ಧಗೊಳಿಸುವಂತೆ ತಕ್ಕ ಕ್ರಮ ಕೈಗೊಳ್ಳಬೇಕೆಂದು ಹಾಗೂ ಈ ಬಗ್ಗೆ ತಾಲ್ಲೂಕಿನ ಇಲಾಖೆಯ ಹಿತದೃಷ್ಟಿಯಿಂದ ಸದರಿ ಅಧಿಕಾರಿಯನ್ನು ಕೂಡಲೇ ವರ್ಗ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ವಿ ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಚಿಕ್ಕನಾಯ್ಕನಹಳ್ಳಿ ಅಸಿಸ್ಟೆಂಟ್ ಇಂಜಿನಿಯರ್ ವೇಲೆ ಕೆಲವು ದೂರುಗಳನ್ನು ಮಾಡಿದ್ದಾರೆ. ತುಮಕೂರು ಜಿಲ್ಲಾ ಪರಿಷತ್ತಿನಿಂದ ವರದಿ ತರಿಸಿಕೊಂಡು ಆ ವರದಿ ಯಾವ ರೀತಿಯಲ್ಲಿ ಬರುತ್ತದೆಯೋ ಆ ಪ್ರಕಾರ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಯ ಮೇಲಿನ ಚರ್ಚೆ

ಬೇಡಿಕೆ ಕ್ರಮ ಸಂಖ್ಯೆ ೫೬. ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

೯—ಸಹಕಾರಿ ಉದ್ಯಮಗಳು

೫೭—ಕ್ರಮಪಡಿಸಿದ ಮಾರುಕಟ್ಟೆಗಳು

೫೪–೨—ಧಾರ್ಮಿಕ ದತ್ತಿಗಳು, ಮಿಷ್ಕಿ, ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳು.

ಶ್ರೀ ಎಚ್. ವಿಕಾಂತಯ್ಯ (ಸಹಕಾರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪೂರೈಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೧೨,೫೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೪,೪೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಆರ್. ಬಿ. ಪೋತ್ದಾರ್. (ಕೈಗಾರಿಕಾ ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಿ ಉದ್ಯಮ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೬೭,೨೬,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೭,೪೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಕೆ. ಆಮರನಾಥ ಶೆಟ್ಟಿ. (ಧಾರ್ಮಿಕ ದತ್ತಿಗಳು ಮಿಷ್ಕಿ ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಿಷ್ಕಿ ಭೂಮಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ೬,೦೩,೯೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರುಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೆಂತೀಯ ಮತ್ತು ಧರ್ಮಾದಾಯ ಕಂಸ್ಥೆಗಳು ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪೂರೈಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೮೭,೭೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.